**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ29-01-2020**

ಮುಂದುವರಿದ ಪಾಟೀ ಸವಾಲುಃ ಶ್ರೀ ಆರ್ ಎನ್ ಕೆ ವಕೀಲರಿಂದ

ನಾನು ದಾವೆ ದಾಖಲಿಸುವ ಪೂರ್ವದಲ್ಲಿ ಪ್ರತಿವಾದಿಯರಿಗೆ ವಕೀರಿಂದ ನೋಟೀಸ್ ಕೊಡಿಸಿರುತ್ತೇನೆ. ನಾನು ನೋಟೀಸ್ ನಲ್ಲಿ 1 ಮತ್ತು 2 ನೇ ಪ್ರತಿವಾದಿಯರ ಬಳಿ ರೈಟರ್ ಆಗಿ ಕೆಲಸ ಮಾಡುತ್ತಿದ್ದೆ ಎಂದು ತಿಳಿಸಿರುತ್ತೇನೆ. ನೋಟೀಸ್ ನಲ್ಲಿ ದಾವಾ ಆಸ್ತಿಯಲ್ಲಿ ಕಾಫಿ ಬೆಳೆ ಇದೆ ಎಂದು ಹೇಳಿರುತ್ತೇನೆ. ವಾದ ಪತ್ರದ ಪ್ಯಾರಾ ನಂ 6 ರಲ್ಲಿ ದಾವಾ ಷೆಡ್ಯೂಲ್ ಪಾಳು ಬಿಟ್ಟಿದ್ದು ಎಂದು ಮತ್ತು ಪ್ಯಾರಾ ನಂ. 12 ರಲ್ಲಿ ದಾವಾ ಎ ಸ್ವತ್ತಿನಲ್ಲಿ ಬಿ ಅನುಸೂಚಿಯಲ್ಲಿ ನಮೂದಿಸಿರುವ ಮನೆಯನ್ನು ಹೊರತುಪಡಿಸಿ ಉಳಿದ ಸ್ವತ್ತು ಖಾಲಿ ಇರುತ್ತದೆ, ಇದರಲ್ಲಿ ಯಾವುದೇ ಬೆಳೆ ಇರುವುದಿಲ್ಲ ಎಂದು ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿ. ನಾನು ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ 4 ಗುಂಟೆ ಎಂದು ಅಂದಾಜಿನಲ್ಲಿ ಬರೆಯಿಸಿರುತ್ತೇನೆ. ಪ್ರತಿವಾದಿಯರು ಬಿ ಷೆಡ್ಯೂಲ್ ಸ್ವತ್ತಿಗೆ ಹೋಗಲು ಅನುಮತಿ ಕೊಟ್ಟಿರುವುದಿಲ್ಲ. 3 ಮತ್ತು 4 ನೇ ಪ್ರತಿವಾದಿಯರು 3 ಎಕರೆ 21 ಗುಂಟೆ ಜಮೀನಿಗೆ ಮನೆ ಒಳಗೊಂಡಂತೆ ಸುತ್ತಲೂ ಬೇಲಿ ಹಾಕಿರುತ್ತಾರೆ ಎಂದರೆ ಸರಿ. ನನಗೆ ದಾವಾ ಆಸ್ತಿಯ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೋಟೋ ತೋರಿಸಿದ್ದು ಅದರಲ್ಲಿ ಪ್ರತಿವಾದಿಯರು ಬೆಳೆದಿರುವ ಕಾಫಿ ಇದೆ ಎಂದರೆ ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ಪೋಟೋವನ್ನು ನಿ.ಡಿ. 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಪೋಟೋ ತೋರಿಸಿದ್ದು ಅದರಲ್ಲಿರುವ ಕಾಫಿ ಗಿಡದ ವಯಸ್ಸು 15 ರಿಂದ 20 ವರ್ಷ ಇರಬಹುದು ಎಂದರೆ ಸಾಕ್ಷಿ ಇರಬಹುದು ಎಂದು ಒಪ್ಪಿಕೊಂಡ ಮೇರೆಗೆ ಸದರಿ ಪೋಟೋವನ್ನು ನಿ.ಡಿ. 2 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಸದರಿ ಕಾಫಿ ಗಿಡ ಯಾವ ಆಸ್ತಿಗೆ ಸಂಬಂಧಿಸಿದ್ದು ಎಂದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಯಿಸಿರುತ್ತೇನೆ ದಾವೆಯಲ್ಲಿ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಮನೆಗಳು ಎಂದು ಹೇಳಿದ್ದು , ಆದರೆ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಒಂದೇ ಮನೆ ಇದೆ. ನೋಟೀಸ್ ಕೊಟ್ಟ ಎಷ್ಟು ದಿನಗಳ ನಂತರ ದಾವಾ ದಾಖಲು ಮಾಡಿರುತ್ತೇನೆಂದು ನೆನಪಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ರಸ್ತೆಯ ಬದಿಯ ಜಮೀನಿಗೆ ಎಕರೆಗೆ ನೋಂದಣಾಧಿಕಾರಿಯವರ ಕಛೇರಿಯಲ್ಲಿ ಎಷ್ಟು ಬೆಲೆ ನಿಗದಿ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು 1 ನೇ ಪ್ರತಿವಾದಿಗೆ ಜಿ ಪಿ ಎ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 2011 ರಲ್ಲಿ 3 ನೇ ಪ್ರತಿವಾದಿ 2 ನೇ ಪ್ರತಿವಾದಿಯಿಂದ ಆಸ್ತಿ ಖರೀದಿಸುವ ಪೂರ್ವದಲ್ಲಿ ಸಂಯುಕ್ತ ಕರ್ನಾಟಕ ದಿನಪತ್ರಿಕೆ ಮತ್ತು ದಿ ಹಿಂದೂ ದಿನಪತ್ರಿಕೆಯಲ್ಲಿ ಜಾಹಿರು ನೋಟೀಸನ್ನು ಪ್ರಕಟಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಮಾಲಿಕತ್ವ ಇಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯಿಂದ 3 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿಸಿ , ನಂತರ 3 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ದಾವಾ ಆಸ್ತಿಗಳನ್ನು ದಾನಪತ್ರದ ಮುಖಾಂತರ ಕೊಟ್ಟಿದ್ದು, ದಾವಾ ಆಸ್ತಿಗಳಿಗೆ 4 ನೇ ಪ್ರತಿವಾದಿ ಹಕ್ಕು ಹೊಂದಿರುತ್ತಾರೆ ಎಂದರೆ ಸರಿಯಲ್ಲ. 1994 ರಿಂದ ಇಲ್ಲಿಯ ತನಕ ದಾವಾ ಆಸ್ತಿ ಪ್ರತಿವಾದಿಯರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಅನಾರೋಗ್ಯದಿಂದ ಊರು ಬಿಡುವ ತನಕ ನನ್ನ ಸ್ವಾಧೀನದಲ್ಲಿತ್ತು ಎಂದು

ಉತ್ತರಿಸುತ್ತಾರೆ. ನಾನು ಸುಳ್ಳು ವ್ಯಾಜ್ಯ ಕಾರಣವನ್ನು ಸೃಷ್ಟಿಸಿಕೊಂಡು ದಾವಾ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗೆ ಹಕ್ಕು ಮತ್ತು ಸ್ವಾಧೀನ ಹೊಂದಿಲ್ಲದ ಕಾರಣ ದಾವೆಯಲ್ಲಿ ಕೇಳಿರುವ ಪರಿಹಾರ ಹೊಂದಲು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ಮಗ ದಾವೆ ದಾಖಲು ಮಾಡಿದ ನಂತರ ನಾನು ಈ ದಾವೆಯನ್ನು ದಾಖಲು ಮಾಡಿರುತ್ತೇನೆ. ನನ್ನ ಮಗ ದಾಖಲು ಮಾಡಿದ ದಾವೆಯಲ್ಲಿ ನಾನು ಲಿಖಿತ ಹೇಳಿಕೆ ಸಲ್ಲಿಸಿದ ಬಗ್ಗೆ ಗೊತ್ತಿಲ್ಲ.

**ಮರು ವಿಚಾರಣೆ : ಇಲ್ಲ.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು